ಶ್ರೀ ಪಿ. ಪಿ. ಹೆಗಡೆ.—ಇಷ್ಟು ನಿಧಾನವಾಗಲು ಕಾರಣರು ಯಾರು ? ಅಂತಹ ಅಧಿಕಾರಿಗಳ ಮೇಲೆ ಸರ್ಕಾರದವರು ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಾಗಲೇ ನ್ಪಷ್ಟವಾಗಿದೆ. ಅವರೇ ಈ ಜಮೀನು ಗಳನ್ನು ಮಾಡುತ್ತಿದ್ದರು. ಅವರನ್ನು ತೋಟಿಗಳು ಎಂಬುದಾಗಿ ಕರೆಯುವ ಪದ್ಧತಿ ಇದೆ. ಅವರಿಗೇ ಈ ಜಮೀನುಗಳನ್ನು ಪುನಃ ಗ್ರಾಂಟ್ ಮಾಡಬೇಕೆಂದಿದೆ. 1963ನೇ ಇನವಿಯಲ್ಲಿ ಈ ಒಂದು ಕಾನೂನು ಬಂದಮೇಲೆ, ಅವರ ಅನುವಂಶಿಕ ಹಕ್ಕು ಇದ್ದುದು ವಜಾ ಆದಮೇಲೆ ಆ ಜಮೀನನ್ನು ಭಾಗಮಾಡಿಕೊಡಬೇಕೆಂದು ಹೇಳಿದ್ದಾರೆ. ಅವರಿಗೆ ಎಷ್ಟು ಆದಾಯ ಬರುತ್ತಿತ್ತು ಅದರ ಒಂದು ಗಣನೆಯ ಮೇಲೆ ಅವರಿಗೆ ಪರಿಹಾರ ಕೊಡಬಾರದೆಂದು ಇದ್ದೇವೆ. ಏಕೆಂದರೆ ಆ ಜಮೀನುಗಳಿಗೆ ಅವರ ಮೊದಲು ಕಂದಾಯ ಕೊಡುತ್ತಿರಲಿಲ್ಲ. ಕಂದಾಯ ಎಷ್ಟು ಸಮನಾಗಿ ಬರಬೇಕಾಗಿತ್ತೊ ಅಷ್ಟು ಅವರಿಂದ ಬಂದಿದೆ. ಆದ್ದರಿಂದ ಜಮೀನಿನ ಕಂದಾಯವನ್ನು ವಜಾ ಹಾಕಿ ಕೊಂಡು ಉಳಿದುದನ್ನು ಪರಿಹಾರ ರೂಪವಾಗಿ ಕೊಡುತ್ತೇವೆ. ಅಲ್ಲದೆ ಜಮೀನನ್ನು ಅವರ ಹೆಸರಿಗೆ ಗ್ರಾಂಟ್ ಮಾಡುವ ವ್ಯವಸ್ಥೆಗೆ ಸೂಕ್ತ ಅಧಿಕಾರವನ್ನು ಅಧಿಕಾರಿಗಳಿಗೆ ಕೊಟ್ಟಿದ್ದೇವೆ.

Classification of Backwardness

576. Sri K. SIDDIAH (Santhemarahally).—

Will the Chief Minister be pleased to state :—

(*a*) the criteria on which the classification of backwardness as set out in Government Order No. GAD 42 SSR 69/1, dated 6th September 1969, for the purpose of reservation of posts under Article 16 (4) of the Constitution was made ;

(*b*) whether it is a fact that the backward classes as specified in the said Government Order have not been adequately represented in the services of the State ;

(*c*) if so, whether any report, in that behalf has been published;

(*d*) the percentage of representation in each class of backward class of citizens (*i.e.*, Scheduled Castes, Scheduled Tribes and other Backward Classes) before the State came to the opinion that above the said backward class of citizens are not adequately represented in the services under the State as required under Art. 16 (4) of the Constitution (Category wise information in respect of other Backward Classes be given) ;

(*e*) the basis on which the percentage of reservation is fixed in favour of Scheduled Castes, Scheduled Tribes and Backward Class in service of the State ?

Sri D. DEVARAJ URS (Chief Minister).—

(*a*) Income and occupation of the Parents/Guardians of a candidate applying for a post under State Service.

(*b*) and (*c*) There is no report about the inadequate representation of other backward classes in the State Civil Services, but the representation of Scheduled Tribes and Scheduled Castes is not adequate.

(SRI D. DEVARAJ URS)

(*d*) The percentage of reservation of Scheduled Castes and Scheduled Tribes on 31st March 1960 was 7·71 per cent and 0·63 per cent respectively. Prior to 16th September 1963, the other Backward classes were classified according to communities and figures regarding their representation are not available. After the Supreme Court held in the case of Balaji *vs.* the State of Mysore that caste alone cannot be the sole criterion for determining backwardness, Government came to the conclusion that persons with a low income and who are following certain occupations would be educationally backward and consequently, inadequately represented in the State services. Hence orders were issued on 16th September 1963 reserving 30 per cent of vacancies for other Backward Classes determined on the basis of income and occupation of the parents/guardians of a candidate. These orders are still in force.

(*e*) The 3 per cent and 15 per cent reservation of vancancies in favour of Scheduled Tribes and Scheduled Castes is based on the percentage of the population of these Tribes and Castes respectively with reference to the population of the State as per the 1961 Census. 30 per cent reservation in favour of other Backward Classes has been made with a view to keep the total reservation within the permissible limit.

ಶ್ರೀ ಕೆ. ಸಿದ್ದಯ್ಯ.—ಇಲ್ಲಿ ಸರ್ಕಾರದವರು ತಿಳಿಸಿರತಕ್ಕ 1969ನೇ ಸರ್ಕಾರಿ ಹುಕುಂ ಮಾಡುವುದಕ್ಕೆ ಮುಂಚೆ ಹಿಂದುಳಿದ ವರ್ಗದವರ ಪ್ರಾತಿನಿಧ್ಯ ಸರ್ಕಾರಿ ನೌಕರಿಗಳಲ್ಲಿ ಬಹಳ ಕಡಮೆ ಇದ್ದುದರಿಂದಲ್ಲವೇ ಅವರಿಗೆ ಕೆಲವು ಸ್ಥಾನಗಳನ್ನು ಮೀಸಲಾಗಿಡಬೇಕೆಂದು ಹೇಳಿರುವುದು ?

†ಶ್ರೀ ಡಿ. ದೇವರಾಜ ಅರಸ್.—ಸರ್ಕಾರದಲ್ಲಿ ಸಧ್ಯದಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಕೋಮಿನವರು ಎಷ್ಟು ಪರ್ಸೆಂಟ್ ಇದ್ದಾರೆಂಬುದನ್ನು ಮಾತ್ರ ಲೆಕ್ಕ ಇಟ್ಟಿದೆ. ಬಾಕಿ ಹಿಂದುಳಿದ ವರ್ಗದವರ ಅಂಕಿ ಸಂಖ್ಯೆಗಳು ಸಿಕ್ಕುವುದಿಲ್ಲ. ಹಿಂದುಳಿದ ವರ್ಗದವರಿಗೆ ಅವರ ಆದಾಯದ ಮೇಲೆ ಪಂತಿಪ್ಪಿದ್ದರೆ ಅವರಿಗೆ ವಿಶೇಷ ರಿಯಾಯಿತಿ ಕೊಡಬೇಕೆಂದು ಹೇಳಿ ಆ ಬಗ್ಗೆ ಶೇಕಡ 30 ರಷ್ಟು ಸ್ಥಾನಗಳನ್ನೂ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಶೇಕಡ 18 ರಷ್ಟು ಸ್ಥಾನಗಳನ್ನೂ ಹೀಗೆ ಒಟ್ಟು ಶೇಕಡ 48 ರಷ್ಟು ಸ್ಥಾನಗಳನ್ನು ಮೀಸಲಾಗಿಟ್ಟಿದೆ. ಇದು ಸುಪ್ರೀಂಕೋರ್ಟಿನವರ ಆಜ್ಞೆಗೆ ಅನುಸಾರವಾಗಿ ಮಾಡಿದ್ದಾಗಿದೆ.

ಶ್ರೀ ಕೆ. ಸಿದ್ದಯ್ಯ.—ನಾನು ಕೇಳುತ್ತಿರುವುದು ೧೦ದೆ 1969 ರಲ್ಲಿ ಈ ಬಗ್ಗೆ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸುವುದಕ್ಕೆ ಪೂರ್ವದಲ್ಲಿ, ಆ ಒಂದು ಆಜ್ಞೆಯನ್ನು ಹೊರಡಿಸಬೇಕಾಗಿದ್ದರೆ, ರಾಜ್ಯಾಂಗದ ವಿಧಿ—16 ರಲ್ಲಿ ಹೇಳಿರುವಂತೆ ಕೆಲವು ಕೋಮುಗಳವರಿಗೆ ಸರ್ಕಾರಿ ನೌಕರಿಗಳಲ್ಲಿ ಸಾಕಷ್ಟು ಪ್ರಾತಿನಿಧ್ಯ ಇಲ್ಲವಿದ್ದರೆ ಅವರಿಗೆ ಪ್ರತ್ಯೇಕವಾಗಿ ಸ್ಥಾನಗಳನ್ನು ಮೀಸಲಾಗಿಡಬಹುದೆಂದು ಅವಕಾಶ ಮಾಡಿಕೊಟ್ಟಿರುವುದರ ಪ್ರಕಾರ, ಸರ್ಕಾರ ಆ ಆಜ್ಞೆ ಹೊರಡಿಸುವುದಕ್ಕೆ ಮುನ್ನ ಆ ಕೋಮುಗಳವರ ಪ್ರಾತಿನಿಧ್ಯ ಸರ್ಕಾರಿ ನೌಕರಿಗಳಲ್ಲಿ ಎಷ್ಟಿತ್ತು ?

ಶ್ರೀ ಡಿ. ದೇವರಾಜ ಅರಸ್.—ಹಿಂದುಳಿದ ವರ್ಗಗಳವರ ಪ್ರಾತಿನಿಧ್ಯ ಸರ್ಕಾರಿ ನೌಕರಿಗಳಲ್ಲಿ ಸಾಕಷ್ಟು ಇಲ್ಲ ಎಂಬುದನ್ನು ತಿಳಿದೇ ಅವರಿಗೆ ಕೆಲವು ಸ್ಥಾನಗಳನ್ನು ರಾಜ್ಯಾಂಗದ ವಿಧಿಗೆ ಅನುಗುಣವಾಗಿ ಹಾಗೂ ಸುಪ್ರೀಂ ಕೋರ್ಟಿನ ತೀರ್ಮಾನಕ್ಕನುಸಾರವಾಗಿ ಹಿಂದುಳಿದ ವರ್ಗದವರಿಗೆ 30 ಪರ್ಸೆಂಟೂ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ 18 ಪರ್ಸೆಂಟೂ ಹೀಗೆ ಒಟ್ಟು 48 ಪರ್ಸೆಂಟ್ ರಿಜರ್ವ್ ಮಾಡಿದೆ.